# ಸೀಟ್ ನಂಬರ್ ಫಿಫ್ಟಿಫೋರ್



■ ಸುಮಾ ರಮೇಶ್

ಯಶವಂತಪುರ ಜಂಕ್ಷನ್ ಬಳಿ ಬಂದು ನಿಂತ ಆಟೊದಿಂದ ಕೆಳಗಿಳಿದ ರಂಜಿತಾ, ಲಗೇಜ್ ಕೈಗೆತ್ತಿಕೊಂಡಳು. 'ಮೇಡಂ ನೂರಾ ಮೂವತ್ತೆಂಟ್ರುಪಾಯಿ... ಅಲ್ಲೇ ಹಿಂದೆ ನೋಡಿ ಕೋಡ್ ಸ್ಕ್ಯಾನ್ ಮಾಡ್ಬಿಡಿ' – ಚಾಲಕ ಹಿಂಬದಿಗೆ ಕೈತೋರಿದ. ಮೊಬೈಲ್ ಹೊರತೆಗೆದು ಗೂಗಲ್ ಪೇ ಮೂಲಕ ಹಣ ಪಾವತಿಸಿದಳು. ಎದುರಿಗಿದ್ದ ಸ್ಟೇಷನ್ ಗಡಿಯಾರ ಸಮಯವಿನ್ನೂ 5.30 ಎಂದು ತೋರುತ್ತಿತ್ತು. ಟ್ರೈನ್ ಹೊರಡುವುದು ಆರು ಗಂಟೆಗೆ. ಗಡಿಬಿಡಿ ಇಲ್ಲದೆ ನಿಧಾನವಾಗಿ ಪ್ಲಾಟ್‌ಫಾರ್ಮ್ ಐದರೆಡೆಗೆ ಹೆಜ್ಜೆ ಇರಿಸಿದಳು.

ಮೆಟ್ಟಿಲು ಹತ್ತುವಾಗ ಮಂಡಿ ನೋವಿನ ಬೇನೆಗೆ ಉಸಿರು ಮೇಲೆ ಬಂದಂತಾಯಿತು. ಮಗಳು ನಿಶಿತಾ ಹಾಸನಕ್ಕೆ ಟಿಕೆಟ್ ಬುಕ್ ಮಾಡಿದ್ದಳು. ಅಲ್ಲಿ ಪತಿಯೊಬ್ಬರನ್ನೇ ಬಿಟ್ಟು ಮಗಳ ಮನೆಗೆ ಬಂದು ವಾರವಾಗಿತ್ತು. ಇನ್ನೂ ಒಂದೆರಡು ದಿನ ಇರು ಎಂಬ ಅವಳ ಓಲೈಕೆಗೆ ಮಣಿಯದೆ ಪತಿಗೆ ಊಟಕ್ಕೆ ತೊಂದರೆ ಎಂದು ಹೊರಟು ಬಂದಿದ್ದಳು. 'ಸರಿಯಾಗಿ ಸೀಟ್ ನಂಬರ್ ನೋಡಿ ಕುಳಿತುಕೋ ಮಮ್ಮಿ, ವಿಂಡೋ ಸೈಡ್ ಬುಕ್ ಮಾಡಿರುವೆ' ಎಂದು ಮಗಳು ಮೊದಲೇ ಎಚ್ಚರಿಸಿದ್ದಳು.

ಪ್ಲಾಟ್‌ಫಾರ್ಮ್ 5ರಲ್ಲಿ ಅದಾಗಲೇ ಬಂದು ನಿಂತಿದ್ದ ಇಂಟರ್ ಸಿಟಿ ಎಕ್ಸ್‌ಪ್ರೆಸ್ ಗಾಡಿಯನ್ನು ನೋಡಿ ರಂಜನಿ ಮನಸ್ಸು ನಿರಾಳವಾಯಿತು. ಹತ್ತುವ ಮುನ್ನ ಒಮ್ಮೆ ಟ್ರೈನ್ ಸಂಖ್ಯೆಯನ್ನು ಕನ್ಫರ್ಮ್ ಮಾಡಿಕೊಂಡು 'ಡಿ ಒನ್' ಕೋಚ್‌ನೊಳಗೆ ತೆರಳಿದಳು. ಓವರ್ ಹೆಡ್ ರ‍್ಯಾಕಿನ ಪಟ್ಟಿಯಲ್ಲಿ ತನ್ನ ಸೀಟ್ ನಂಬರ್ ಗುರುತಿಸಿ ಕುಳಿತಳು. ಲಗೇಜ್ ಕಾಲಿನ ಬಳಿಯೇ ಇರಿಸಿಕೊಂಡು ಸೀಟಿಗೊರಗಿದಳು. ಎದುರಿನ ಸೀಟಿನಲ್ಲಿ ಯುವಕನೊಬ್ಬ ಆಗಷ್ಟೇ ಬಂದು ಕುಳಿತು ಗಡಿಬಿಡಿಯಲ್ಲಿ ಲ್ಯಾಪ್‌ಟಾಪ್ ಹೊರತೆಗೆದು ಲಾಗಿನ್ ಆಗಲು ಮುಂದಾಗುತ್ತಿದ್ದ. ಪಕ್ಕದ ಸಾಲಿನಲ್ಲಿ ಕುಳಿತಿದ್ದ ಉತ್ತರ ಭಾರತದ ಕುಟುಂಬದವರು ಚಪಾತಿ, ಆಲೂ ಕರಿ ತಿನ್ನುತ್ತಾ ಹಿಂದಿಯಲ್ಲಿ ಸ್ವಚ್ಛಂದವಾಗಿ ಹರಟುತ್ತಿದ್ದರು.

ಆರಾಮವಾಗಿ ಕಾಲು ಚಾಚಿ ಕುಳಿತು ಸುತ್ತಲೂ ಒಮ್ಮೆ ದೃಷ್ಟಿ ಹಾಯಿಸಿದಳು. ಮೊಬೈಲ್ ರಿಂಗಣಿಸಿದಾಗ ತಟ್ಟನೆ ಎಚ್ಚೆತ್ತು ಅದನ್ನು ಬ್ಯಾಗಿನಿಂದ ಹೊರತೆಗೆದಳು. 'ಮಮ್ಮಿ... ರೀಚ್ ಆದ್ಯಾ...?' ಮಗಳು ನಿಶಿತಾಳ ಆತಂಕದ ದನಿ. 'ಹ್ಞೂಂ ನಿಶು, ನನ್ನ ಸೀಟ್‌ನಲ್ಲಿ ಕುಳಿತಿರುವೆ, ನೋ ಪ್ರಾಬ್ಲಂ'. 'ಓಕೆ ಮಾಮ್... ಟೇಕ್ ಕೇರ್...' ಕರೆ ಸ್ಥಗಿತಗೊಂಡಿತು. ಹಾಗೆಯೇ ಸೀಟಿಗೊರಗಿ ವಾಟ್ಸಾಪ್ ಚೆಕ್ ಮಾಡುತ್ತಾ ಕುಳಿತಳು.

'ಎಕ್ಸ್‌ಕ್ಯೂಸ್ ಮೀ... ನೀವು ನನ್ನ ಸೀಟ್‌ನಲ್ಲಿ ಕುಳಿತಿರುವಿರಿ' ತಟ್ಟನೆ ದನಿ ಬಂದತ್ತ ತಿರುಗಿದಳು. ಯುವಕನೊಬ್ಬ ತನ್ನೆಡೆಗೇ ನೋಡುತ್ತಾ ನಿಂತಿದ್ದ. ಗಲಿಬಿಲಿಗೊಂಡ ರಂಜಿತಾ 'ಇಲ್ವಲ್ಲಾ... ಇದು ನನ್ನದೇ ಸೀಟ್, ನಿಮ್ಮ ನಂಬರ್ ಎಷ್ಟು...?' ಎಂದಳು ಆತಂಕದಿಂದ.

'ಫಿಫ್ಟಿಫೋರ್...!'

'ಅರೆ... ನನ್ನದೂ ಫಿಫ್ಟಿಫೋರ್... ಡೇಟ್ ಚೆಕ್ ಮಾಡಿ...'

'ಮೇಡಂ ಡೇಟ್ ಸರಿಯಾಗಿಯೇ ಇದೆ. ನಿಮ್ಮದು ಡಿ ಒನ್ ಕೋಚ್ ಹೌದಾ ನೋಡಿ...'

'ಹೌದು... ಡಿಒನ್ ಫಿಫ್ಟಿಫೋರ್...' ರಂಜಿತಾ ಮತ್ತೊಮ್ಮೆ ಪರಿಶೀಲಿಸಿ ಅವನೆಡೆಗೆ ನೋಡಿದಳು.

'ಮೇಡಂ... ಹಾಗೆ ಆಗೋದಕ್ಕೆ ಸಾಧ್ಯವೇ ಇಲ್ಲ. ನಿಮ್ದೆಲ್ಲೋ ವೆಯ್ಟಿಂಗ್ ಲಿಸ್ಟ್ ಇರ್ಬೇಕು ಫೋನ್ ಕೊಡಿ ಇಲ್ಲಿ...' ಕೈ ಚಾಚಿದ. ಹೊರಡುವ ಸಮಯವಾಗಲೇ ಸನ್ನಿಹಿತವಾಗಿ ರೈಲು ಚಟುವಟಿಕೆಗೆ ಸಜ್ಜಾಗುತ್ತಿತ್ತು.

'ವೆಯ್ಟಿಂಗ್ ಲಿಸ್ಟ್ ಆದ್ರೆ ಸೀಟ್ ನಂಬರ್ ಎಲ್ಲಿ ಅಲಾಟ್ ಆಗುತ್ತೆ...!? ನೋಡಪ್ಪ ನನ್ನ ಟಿಕೆಟ್ ಕನ್ಫರ್ಮ್ ಆಗಿದೆ' ಎಂದು ಕೈ ಮುಂದಕ್ಕೆ ಚಾಚಿ ಮೊಬೈಲ್ ಯುವಕನೆದುರಿಗೆ ಹಿಡಿದಳು. ಕ್ಷಣಾರ್ಧದಲ್ಲಿ ಅದನ್ನು ಕೈಗೆತ್ತಿಕೊಂಡ ಯುವಕ ಆ ಜನಜಂಗುಳಿಯಲ್ಲಿ ಮಾಯವಾಗಿದ್ದ.

ಊಹಿಸದ ಮಗ್ಗುಲಿನಿಂದ ಅನಿರೀಕ್ಷಿತ ಆಘಾತವಾಗಿತ್ತು. ನಿಜಸ್ಥಿತಿ ಅರಿವಾಗುವಷ್ಟರಲ್ಲಿ ಪರಿಸ್ಥಿತಿ ಕೈಮೀರಿ ಹೋಗಿತ್ತು.

ಪ್ರತಿಕ್ರಿಯಿಸಿ: feedback@sudha.co.in